**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಪಿರಿಯಾಪಟ್ಟಣ**

**OS No** 11/2022

| | | | |
|---|---|---|---|
| **ಹೆಸರು** | ಬಿ.ಪಿ.ಪಾಲಾಕ್ಷ | **ಪಿಡಬ್ಲೂ:** | 02 |
| **ತಂದೆ/ಗಂಡನ ಹೆಸರು** | ಪಿ.ಎಂ.ಪುಟ್ಟಣಯ್ಯ | **ಸಿಡಬ್ಲೂ:** | |
| **ವಯಸ್ಸು** | 43 ವರ್ಷ | | |
| **ಉದ್ಯೋಗ** | ವ್ಯವಸಾಯ | | |
| **ವಾಸಸ್ಥಳ** | ಬಿಲಗುಂದ ಗ್ರಾಮ | | |

**ದಿಃ 11.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದೆ.**

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಕೆ.ಡಿ.ಎಸ್ ರವರಿಂದ**

ನಿ.ಪಿ-1(f) ನಲ್ಲಿ ಗುರುತಿಸಿರುವ ಸಹಿಯನ್ನು ನೋಡಿ ಸಾಕ್ಷಿಯು ಅದು ತನ್ನ ಸಹಿ ಎಂದು ಹೇಳಿರುತ್ತಾರೆ. ನಿ.ಪಿ-1 ರ ಪತ್ರವನ್ನು ಸಂದೀಪ ಕೆ.ಡಿ ರವರು ಬರೆದಿದ್ದಾರೆ. ನಿ.ಪಿ-1 ಕ್ಕೆ ನನ್ನ ಸಮಕ್ಷಮ ಸುಮನ, ಪ್ರತಿವಾದಿಗಳಾದ ಶಿವಣ್ಣೇಗೌಡ, ಶೇಖರೇಗೌಡ, ಪೂರ್ಣಿಮ, ಮೂರ್ತಿಗೌಡ ಮತ್ತು ಸ್ವಾಮಿಗೌಡ ಸಹಿ ಹಾಕಿದ್ದಾರೆ. ದಾವಾ ಆಸ್ತಿಯನ್ನು ಪ್ರತಿವಾದಿಗಳು ರೂ.9,50,000/- ಗೆ ಮಾರಾಟ ಮಾಡವುದಾಗಿ ಒಪ್ಪಿಕೊಂಡು ವಾದಿಗೆ ನಿ.ಪಿ-1 ರಂತೆ ಕರಾರು ಪತ್ರ ಬರೆದುಕೊಟ್ಟು ಆ ಪತ್ರದ ಮೂಲಕ ಪ್ರತಿವಾದಿಗಳು ವಾದಿಗೆ ರೂ.9,25,000/- ಮುಂಗಡ ಹಣ ಕೊಟ್ಟಿದ್ದಾರೆ.

**ಮರು ವಿಚಾರಣೆ ಇಲ್ಲ**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)*

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**

ಹೇಳಿಕೆಯನ್ನು ನಿ.ಪಿ–1 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ–1(ಎ) ಎಂದು ಗುರುತಿಸಲಾಯಿತು. ಹೇಳಿಕೆಯಲ್ಲಿರುವ ವಿಷಯ ಗೊತ್ತಿಲ್ಲ. ಪೊಲೀಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿಲ್ಲ.

ಪೊಲೀಸರು ಒಂದು ಬಿಳಿಯ ಹಾಳೆಯ ಮೇಲಿ ನನ್ನ ಸಹಿ ಪಡೆದಿದ್ದರು.

ಸಾಕ್ಷಿಯು ಮಹಜರ್ ಲ್ಲಿರುವ ತನ್ನ ಸಹಿಯನ್ನು ಗುರುತಿಸಿದ ಮೇರೆಗೆ ಮಹಜರ್ ನ್ನು ನಿ.ಪಿ–2 ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ–2(ಎ) ಎಂದು ಗುರುತಿಸಲಾಯಿತು. ಮಹಜರ್ ನಲ್ಲಿ ಬರೆದಿರುವ ವಿಷಯಗಳು ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಮಹಜರ್ ಮಾಡಿ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ.